‘‘ನಾನು ಕಂಪ್ಲೇಂಟ್ ಕೊಡುವುದು ಕೊಡುತ್ತೇನೆ. ನಾಡಿದ್ದು ಎಂಎಲ್‌ಎ ಶ್ರೀಕಂಠಪ್ಪ ಬರುತ್ತಾರೆ. ಅವರಿಗೇ ಅರ್ಜಿ ಕೊಡುತ್ತೇನೆ’’ ಎಂದು ಹೇಳುತ್ತಿದ್ದಂತೆ ಫಾರೆಸ್ಟರ್ ಚನ್ನಪ್ಪ ಮೆತ್ತಗಾದ. ಎಂಎಲ್‌ಎ ಸುದ್ದಿ ಕೇಳುತ್ತಲೇ ಫಾರೆಸ್ಟರ್ ಚನ್ನಪ್ಪ ಒಳಗೊಳಗೇ ಸಣ್ಣಗೆ ನಡುಗಿದ. ಅದಕ್ಕೂ ಕಾರಣವಿತ್ತು. ಚನ್ನಪ್ಪ ಮೊನ್ನೆ ಒಂದು ದಿನ ಕೆರೆಮಕ್ಕಿ ಜಟ್ಟನಾಯ್ಕನ ಗದ್ದೆಯಲ್ಲಿ ಹಂದಿ ಬಿದ್ದಿದೆ ಎಂದು ಯಾರೋ ಹೇಳಿದ್ದನ್ನು ಕೇಳಿ ಅವರ ಮನೆಗೆ ಹೋಗಿ, ‘‘ಯಾರು ಹಂದಿ ಹೊಡೆದದ್ದು? ಕೇಸ್ ಹಾಕಿಬಿಡ್ತೀನಿ’’ ಎಂದು ರೋಪು ಹಾಕಿದ್ದ.

ಮಾರನೆಯ ದಿನವೇ ಬಗರ್ ಹುಕುಂ ಜಮೀನು ಹಕ್ಕುಪತ್ರ ವಿತರಣಾ ಸಮಾರಂಭ ಊರಲ್ಲಿತ್ತು. ಎಂಎಲ್‌ಎ ಶ್ರೀಕಂಠಪ್ಪ ಭಾಗವಹಿಸಿದ್ದ ದೊಡ್ಡ ಸಭೆ. ಜನರ ಮುಂದೆ ಹೀರೊ ಆಗಲು ಇದಕ್ಕಿಂತ ಬೇರೆ ಛಾನ್ಸ್ ಬೇಕೆ? ಯಾರೋ ಹಂದಿ ಹೊಡೆದ್ದಕ್ಕೆ ಕೇಸ್ ಹಾಕ್ತೇನೆಂದ ಫಾರೆಸ್ಟರ್ ಚನ್ನಪ್ಪನ ವಿಷಯವನ್ನು ಯಾರೋ ಪ್ರಸ್ತಾಪಿಸಿದ್ದೇ ತಡ, ಕೆಂಡಾಮಂಡಲವಾದ ಎಂಎಲ್‌ಎ ಶ್ರೀಕಂಠಪ್ಪ, “ಯಾವನೋ ಅವ್ನು ಲೋಫರ್? ರೈತರಿಗೆ ತೊಂದರೆ ಕೊಡೋನು? ಕರ್ಕೊಂಬರ್ರೋ ಇಲ್ಲಿ’’ ಎಂದ.

ಸಭೆಗೆ ಬಂದ ಫಾರೆಸ್ಟರ್ ಚನ್ನಪ್ಪನನ್ನು ತರಾಟೆಗೆ ತೆಗೆದುಕೊಂಡ ಎಂಎಲ್‌ಎ ಶ್ರೀಕಂಠಪ್ಪ, ‘‘ಬಡ್ಡೀ ಮಗನೆ, ಹಂದಿ ಹೊಡೆದದ್ದಕ್ಕೆ ಕೇಸ್ ಹಾಕ್ತೀಯಾ? ಸಸ್ಪೆಂಡ್ ಮಾಡಿಸ್ತೇನೆ ನೋಡು ನಿನ್ನಾ...’’ ಎಂದು ಅಬ್ಬರಿಸಿದ್ದ. ಆ ಕ್ಷಣದಿಂದ ಫಾರೆಸ್ಟರ್ ಚನ್ನಪ್ಪನಿಗೆ ಈ ದೀವರ ಮಕ್ಕಳ ಸಾವಾಸವೇ ಸಾಕು ಎನ್ನಿಸಿತ್ತು. ಎಂಎಲ್‌ಎ ಶ್ರೀಕಂಠಪ್ಪನ ಹೆಸರು ಹೇಳುತ್ತಲೇ ಥಂಡಾ ಹೊಡೆದ ಚನ್ನಪ್ಪ. ಅವನನ್ನು ಮೆತ್ತಗೆಮಾಡಲೆಂದೇ ಪಾಶಣ್ಣ ಎಂಎಲ್‌ಎ ಹೆಸರು ಪ್ರಸ್ತಾಪಿಸಿದ್ದ. ಫಾರೆಸ್ಟರ್ ಯೂಟರ್ನ್ ಹೊಡೆದು, “ಭಟ್ರೇ ನೀವೇನೂ ಯೋಚನೆ ಮಾಡ್ಬೇಡಿ. ನಾನು ಆ ಕನ್ನನಾಯ್ಕನಿಗೆ ಹೇಳ್ತೇನೆ. ಅವನ ಹತ್ತಿರ ಒಳ್ಳೆ ಕೋವಿ ಇದೆ. ಒಂದೆರಡು ಹಂದಿ ಬೀಳಲಿ, ಎಲ್ಲಾ ಸಮಾ ಆಗುತ್ತದೆ’’ ಎಂದು ಅವನನ್ನು ಸಮಾಧಾನಪಡಿಸಿದ.

ಪಾಶಣ್ಣನಿಗೆ ಖುಷಿಯಾಗಿ, “ಪರಿಹಾರದ ಅರ್ಜಿ?” ಎಂದ.

“ಓ, ಹೌದು ಅದಕ್ಕೆ ಒಂದು ಕೆಲಸ ಮಾಡಿ. ನಾನು ನಾಳೆ ನಿಮ್ಮ ತೋಟಕ್ಕೆ ಬರುತ್ತೇನೆ. ಆ ಭದ್ರಣ್ಣನಿಗೆ ಹೇಳಿ ಫೋಟೊ ಹೊಡೆಸಿಕೊಡಿ. ಹಾಗೇ ಭದ್ರಣ್ಣನಿಗೆ ಹೇಳಿದರೆ ಅರ್ಜಿಯನ್ನೂ ಬರೆದು ಕೊಡ್ತಾನೆ. ಒಂದು ಸೈನ್ ಮಾಡಿ ತಂದುಕೊಡಿ. ನಾನು ರೇಂಜರು, ಡಿಎಫ್‌ಓಗೆ ಕಳಿಸಿ ಮಾತಾಡುತ್ತೇನೆ.’’ ಎಂದು ಚನ್ನಪ್ಪ ಸಮಾಧಾನಪಡಿಸಿದ.

“ಎಷ್ಟು ಸಿಗಬಹುದು ಪರಿಹಾರ?’’ ಪಾಶಣ್ಣ ಕೇಳಿದ.

‘‘ಒಂದು ಗಿಡಕ್ಕೆ ಕನಿಷ್ಠ ಅಂದರೂ 100 ರೂಪಾಯಿ ಸಿಗಬೇಕು. 150 ಗಿಡ ಅಂದರೆ ಎಷ್ಟಾಯ್ತ್ರೀ... 15 ಸಾವಿರ ಸಿಗುತ್ತೆ, ಪರಿಹಾರದ ಹಣ. ನಿಮಗೆ ಸಿಕ್ಕರೆ ನನಗೆ ಸಿಕ್ಕ ಹಾಂಗೆ. ಅದರಲ್ಲೇನು? ಕವಳದ ಸಂಚಿ ಕೊಡಿ. ಒಂದು ಕವಳ ಹಾಕೋಣ. ಸ್ವಲ್ಪ ಅಡಿಕೆ ಇದ್ದರೆ ಕೊಡಿ.’’ ಎಂದ ಚನ್ನಪ್ಪ. ಪಾಶಣ್ಣ ದುಡ್ಡು ಕೈಗೇ ಸಿಕ್ಕಂತೆ ಉಬ್ಬಿಹೋದ. ಮತ್ತೆ ಹೋಗ್ತಾ, ‘‘ಭದ್ರಣ್ಣಂಗೆ ಹೇಳಿ, ನಾನು ಹೇಳಿದೇನೆ ಎಂದು ಹೇಳಿ’’ ಎಂದು ಮತ್ತೊಮ್ಮೆ ನೆನಪಿಸಿದ ಚನ್ನಪ್ಪ.

ಈ ಭದ್ರಣ್ಣ ಮಹಾ ಪಾಕಡಾ. ಇತ್ತೀಚೆಗೆ ಗ್ರಾ.ಪಂ. ಸದಸ್ಯ ಬೇರೆ ಆಗಿದ್ದಾನೆ. ಜನರ ಸೇವೆ ಮಾಡಲು ತುದಿಗಾಲಲ್ಲಿ ನಿಂತಿದ್ದಾನೆ. ಪಾಶಣ್ಣ ಅಲ್ಲಿಂದ ಹೊರಟವನು ಭದ್ರಣ್ಣನನ್ನು ಕಂಡ. ವಿಷಯ ತಿಳಿಸಿದ. ಮಾರನೆಯ ದಿನವೇ ಫಾರೆಸ್ಟರ್ ಚನ್ನಪ್ಪ, ಭದ್ರಣ್ಣ ತೋಟಕ್ಕೆ ಬಂದರು. ಫಾರೆಸ್ಟರ್ ಚನ್ನಪ್ಪನೂ ಸ್ಥಳ ಮಹಜರು ಮಾಡಿದ ಫೋಟೊಕ್ಕೆ ಪೋಸ್ ಕೊಟ್ಟ. ಫೋಟೊಗಳಿಗೆ, ರೆಕಾರ್ಡ್ ಬಿಲ್ಡಪ್‌ಗೆ ಅಂತ ಒಂದಿಷ್ಟು ಹಣ ಕಿತ್ತರು. ಉಪ್ಪಿಟ್ಟು, ಕೇಸರಿಭಾತ್, ಕಾಫಿಯ ಸಮಾರಾಧನೆಯೂ ಆಯಿತು.